**ಎರಡನೇ ಅಪರ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವನಹಳ್ಳಿ**

**:: ಉಪಸ್ಥಿತರು ::**

ಶ್ರೀ. ಕೆಂಚನಗೌಡ ಪಾಟೀಲ ಬಿ.ಎ.ಎಲ್.ಎಲ್.ಬಿ
2ನೇ ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ದೇವನಹಳ್ಳಿ.

**ಅಪರಾಧಿಕ ಪ್ರಕರಣ ಸಂಖ್ಯೆ: 4022/2024**

**ತೀರ್ಪಿನ ದಿನಾಂಕ: 17ನೇ ಮಾರ್ಚ ಮಾಹೆ, 2026ನೇ ಇಸವಿ.**

**ಪಿರ್ಯಾದಿದಾರ/ರು** : ಕರ್ನಾಟಕ ಸರಕಾರವನ್ನು ಪ್ರತಿನಿಧಿಸುವವರು
ಆರಕ್ಷಕ ಉಪ ನೀರಿಕ್ಷಕರು,
ವಿಜಯಪುರ ಪೋಲಿಸ್ ಠಾಣೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ .

**(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)**

**: ವಿರುದ್ಧ :**

ಆರೋಪಿತ/ರು:ಎ-1. ಅಜೀಜ್ ಮುಬಾರಕ್ ಬಿನ್ ಮುಸ್ತಫಾ,
ವಯಸ್ಸು: 33 ವರ್ಷ,

ಎ-2. ಅಮ್ರೀನ್ ಬಿನ್ ಅಜೀಜ್ ಮುಬಾರಕ್.
ವಯಸ್ಸು: 27 ವರ್ಷ,
ಇಬ್ಬರೂ ವಾಸ: ಟಿಪ್ಪು ನಗರ, ವಿಜಯಪುರ ಟೌನ್,
ದೇವನಹಳ್ಳಿ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

**(ಆರೋಪಿತರ ಪರ ಪ್ರತಿನಿಧಿಸುವವರು ಶ್ರೀ. ಮುನಿರಾಜು. ಎಮ್ – ವಕೀಲರು)**

| | | |
|---|---|---|
| 1 | ಅಪರಾಧ ಘಟಿಸಿದ ದಿನಾಂಕ | 02-08-2024 |
| 2 | ಠಾಣೆಯಲ್ಲಿ ಅಪರಾಧ ವರದಿಯಾದ ದಿನಾಂಕ | 02-08-2024 |
| 3 | ಪಿರ್ಯಾದುದಾರರ ಹೆಸರು | ಶ್ರೀಮತಿ. ಜಮೀಲಾ ಕೋಂ ಅಜೀಜ್ ಮುಬಾರಕ್ |
| 4 | ಆರೋಪಿತರ ಬಂಧನದ ದಿನಾಂಕ | ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ. |

| | | |
|---|---|---|
| 5 | ಸಾಕ್ಷ್ಯ ವಿಚಾರಣೆ ಪ್ರಾರಂಭವಾದ ದಿನಾಂಕ | 12-03-2026 |
| 6 | ಸಾಕ್ಷ್ಯ ವಿಚಾರಣೆ ಮುಕ್ತಾಯವಾದ ದಿನಾಂಕ | 12-03-2026 |
| 7 | ದೂರು ನೀಡಿದ ಅಪರಾಧದ ಕಲಮುಗಳು | ಭಾರತೀಯ ನ್ಯಾಯ ಸಂಹಿತಾ ಕಲಂ. 85, 115(2), 352, 351(2), 351(3) ಸಹವಾಚಕ ಕಲಂ.3(5) |
| 8 | ನ್ಯಾಯಾಧೀಶರ ತೀರ್ಪಿನ ಅಭಿಪ್ರಾಯ | ಅಂತಿಮ ಆದೇಶದಂತೆ |
| 9 | ಫಿರ್ಯಾದುದಾರರ ಪರ ವಾದ ಮಂಡಿಸಿದವರು | ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು. |
| 10 | ಆರೋಪಿತರ ಪರ ವಾದ ಮಂಡಿಸಿದವರು | **ಶ್ರೀ. ಮುನಿರಾಜ. ಎಮ್ - ವಕೀಲರು.** |

**(ಶ್ರೀ.ಕೆಂಚನಗೌಡ ಪಾಟೀಲ)**
2ನೇ ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ.

**ತೀರ್ಪು**

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಜಯಪುರ ವೃತ್ತದ ವಿಜಯಪುರ ಆರಕ್ಷಕ ಠಾಣೆಯ ಸರಹದ್ದಿಗೆ ಸೇರಿದ, ವಿಜಯಪುರ ಆರಕ್ಷಕ ಠಾಣೆಯಲ್ಲಿ ದಾಖಲಾದ ಪ್ರಕರಣದ ಕುರಿತು ವಿಜಯಪುರ ಆರಕ್ಷಕ ಠಾಣೆಯ ಆರಕ್ಷಕ ಉಪ ನೀರಿಕ್ಷಕರು ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ಕಲಂ. 85, 115(2), 352, 351(2), 351(3) ಸಹವಾಚಕ ಕಲಂ.3(5)ರ ಅಡಿಯಲ್ಲಿ ಆರೋಪಿಗಳು ಅಪರಾಧ ಮಾಡಿದ್ದಾರೆಂದು ಅವರ ವಿರುದ್ಧ ಶಿಕ್ಷಾರ್ಹ ಅಪರಾಧಗಳಿಗಾಗಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇರುತ್ತದೆ:**

ದಿ. 02-08-2024 ರಂದು ಬೆಳಗಿನ ಜಾವ 2-30 ಗಂಟೆ ವಿಜಯಪುರ ಪೋಲಿಸ್ ಠಾಣಾ ಸರಹದ್ದು, ವಿಜಯಪುರ ಟೌನ್, ಟಿಪ್ಪು ನಗರದಲ್ಲಿ 1ನೇ ಆರೋಪಿ ಮನೆಯಲ್ಲಿ 1ನೇ ಆರೋಪಿಯು ಮನೆಗೆ ತಡವಾಗಿ ಬಂದಿದ್ದನ್ನು ಚಾಸಾ-1 ರವರು

ಪ್ರಶ್ನಿಸಿದ್ದಕ್ಕೆ ಏಕಾ-ಏಕಿ ಚಾಸಾ-1 ರವರ ಬಲಗೈ ತಿರುಗಿಸಿ, ಕತ್ತು ಹಿಸುಕಿ, ಕೈ-ಕಾಲುಗಳಿಂದ ಒದ್ದು, ಬೆನ್ನಿಗೆ ಮತ್ತು ಎದೆಗೆ ಹೋಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಈ ವಿಚಾರವನ್ನು ನಿಮ್ಮ ಮನೆಯವರಿಗೆ ತಿಳಿಸಿದರೆ ನಿನ್ನನ್ನು ಸಾಯಿಸಿ ಬಿಡುತ್ತೇನೆಂದು ಪ್ರಾಣ ಬೆದರಿಕೆ ಹಾಕಿ, ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-1 ರವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳ ನೀಡಿದ್ದು ಹಾಗೂ 2ನೇ ಆರೋಪಿಯು ಚಾಸಾ-1 ರವರ ಫೋನ್ ಗೆ ಕರೆ ಮಾಡಿ ನಾನು 1ನೇ ಆರೋಪಿಯ ಮೊದಲನೇಯ ಹಂಡತಿ, ನಮಗೆ ಮದುವೆಯಾಗಿ 5 ತಿಂಗಳ ಮಗು ಇದೆ, ನನ್ನ ಗಂಡನನ್ನು ನೀನು ಬಿಟ್ಟು ಬಿಡು ಎಂದು ಹೇಳಿ ಮಾನಸಿಕವಾಗಿ ಕಿರುಕುಳ ಕೊಟ್ಟಿರುತ್ತಾರೆಂದು ತನಿಖೆಯಿಂದ ದೃಡಪಟ್ಟಿರುತ್ತದೆ ಎಂದು ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ.

**3.** ಚಾ.ಸಾ-1 ರವರು ನೀಡಿದ ದೂರನ್ನು ಚಾಸಾ-7 ರವರು ಸ್ವೀಕರಿಸಿ ಆರೋಪಿತರ ವಿರುದ್ಧ ವಿಜಯಪುರ ಪೋಲಿಸ್ ಠಾಣೆಯ ಗುನ್ನಾ ನಂ.141/2024 ನೇದ್ದನ್ನು ದಾಖಲಿಸಿ, ಈ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿದ ನಂತರ ಆರೋಪಿತರ ವಿರುದ್ದ ಭಾರತೀಯ ನ್ಯಾಯ ಸಂಹಿತಾ ಕಲಂ. 85, 115(2), 352, 351(2), 351(3) ಸಹವಾಚಕ ಕಲಂ. 3(5)ರ ಅಡಿಯಲ್ಲಿ ಅಂತಿಮ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**4.** ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿದ ನಂತರ ಆರೋಪಿಗಳ ವಿರುದ್ದ ಹೊರಸಿರುವ ಆರೋಪಗಳನ್ನು ರುಜುವಾತು ಪಡಿಸಲು ಸಾಕ್ಷ್ಯಾಧಾರಗಳು ಇರುವುದರಿಂದ ಆರೋಪಗಳ ಮೇಲೆ ಸಂಜ್ಞೆಯನ್ನು ತೆಗೆದುಕೊಂಡು, ಆರೋಪಿಗಳ ವಿರುದ್ದ ಅಪರಾಧಿಕ ಪ್ರಕರಣವನ್ನು ದಾಖಲಿಸಿ, ಆರೋಪಿಗಳಿಗೆ ನ್ಯಾಯಾಲಯದಿಂದ ಸಮನ್ಸ ಜಾರಿಗೋಳಿಸಿದ ಮೇರೆಗೆ, ಆರೋಪಿಗಳು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ, ಜಾಮೀನಿನ ಮೇಲೆ ಬಿಡುಗಡೆಗೊಂಡಿರುತ್ತಾರೆ. ಆರೋಪಿಗಳಿಗೆ ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ ಕಲಂ.230 ರಡಿಯಲ್ಲಿ ನಿರ್ದೇಶಿಸಿರುವಂತೆ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ಪೂರೈಸಲಾಗಿರುತ್ತದೆ.

**5.** ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು. ಆದರೆ ನ್ಯಾಯಾಲಯಕ್ಕೆ ಆರೋಪಿಗಳನ್ನು ದೋಷಾರೋಪಣೆ ರಚಿಸುವ ಪೂರ್ವದಲ್ಲಿಯೇ ವಿಮೋಚನೆ ಮಾಡಲು ಯಾವುದೇ ಸಕಾರಣಗಳು ಈ ನ್ಯಾಯಾಲಯಕ್ಕೆ ಕಂಡು ಬರದ ಕಾರಣ ಮತ್ತು ದೋಷಾರೋಪಣೆ

ಪಟ್ಟಿಯಲ್ಲಿ ಆರೋಪಿಗಳ ವಿರುದ್ದ ಸಾಕಷ್ಟು ಅಂಶಗಳು ಕಂಡು ಬಂದಿದ್ದರಿಂದ ಮೇಲ್ಕಾಣಿಸಿದ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಲಾಯಿತು.

**6.** ತದನಂತರ ಆರೋಪಿಗಳ ವಿರುದ್ದ ರಚಿಸಲಾದ ಭಾರತೀಯ ನ್ಯಾಯ ಸಂಹಿತಾ ಕಲಂ. 85, 115(2), 352, 351(2), 351(3) ಸಹವಾಚಕ ಕಲಂ.3(5)ರ ಅಡಿಯಲ್ಲಿನ ದೋಷಾರೋಪಣೆಯನ್ನು ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದಾಗ, ಆರೋಪಿಗಳು ತಮ್ಮ ಮೇಲೆ ಹೊರೆಸಿರುವ ಆರೋಪಣೆಗಳು ಸುಳ್ಳು ಎಂದು, ತಾವು ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

**7.** ಅಭಿಯೋಜನೆಯು ಆರೋಪಿಗಳ ವಿರುದ್ದ ಮಾಡಿರುವ ಆರೋಪಗಳನ್ನು ನಿಸ್ಸಂದೇಹಾತೀತವಾಗಿ ರುಜುವಾತು ಪಡಿಸಲು ತಮ್ಮ ಪರವಾಗಿ ಒಟ್ಟು 3 ಸಾಕ್ಷಿದಾರರನ್ನು ಪ್ರಾಸಾ-1 ರಿಂದ ಪ್ರಾಸಾ-3 ಎಂದು ವಿಚಾರಣೆಗೆ ಒಳಪಡಿಸಿ, ನಿಪಿ-1 ರಿಂದ 4 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪ್ರಕರಣದ ಸಾಕ್ಷಿದಾರರಾದ ಪ್ರಾಸಾ-1 ರಿಂದ ಪ್ರಾಸಾ-3 ರವರು ಈ ಪ್ರಕರಣದ ಪಿರ್ಯಾದು, ಪ್ರತ್ಯಕ್ಷ, ನೊಂದ, ಗಾಯಾಳು ಮತ್ತು ಸ್ಥಳ ಮಹಜರ್ ಸಾಕ್ಷಿದಾರರಾಗಿರುತ್ತಾರೆ. ಪ್ರಾಸಾ-1 ರಿಂದ ಪ್ರಾಸಾ-3ರವರು ಅಭಿಯೋಜನೆಯ ಪ್ರಕರಣದ ಅತ್ಯಂತ ಪ್ರಮುಖ ಸಾಕ್ಷಿದಾರರಾಗಿದ್ದು, ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದ ಕಾರಣ, ಚಾಸಾ-4 ರಿಂದ 7 ರವರೆಗಿನ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಯಾವುದೇ ಸಹಾಯ ಆಗುವುದಿಲ್ಲವೆಂದು ಕಂಡು ಬಂದ ಕಾರಣ ನ್ಯಾಯಾಲಯವು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಬೇಕೆಂಬ ಮನವಿಯನ್ನು ತಿರಸ್ಕರಿಸಿರುತ್ತದೆ.

**8.** ಅಭಿಯೋಜನೆಯ ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಪ್ರಾ.ಸಾ 1 ರಿಂದ 3 ರವರು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯವನ್ನು ನೀಡಿರುವುದರಿಂದ, ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ, 2023 ರ ಕಲಂ. 351(1)(b)ರ ಅಡಿಯಲ್ಲಿ ಆರೋಪಿತರನ್ನು ಪ್ರಶ್ನಿಸಿ ಅವರ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ.

**9.** ಪ್ರಕರಣದ ವಿಚಾರಣೆಯ ತರುವಾಯ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರ ಮತ್ತು ಆರೋಪಿಗಳ ಪರ ವಕೀಲರ ವಾದವನ್ನು ಸುನಾವಣೆ ಮಾಡಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

**10.** ಅಭಿಯೋಜನೆಯು ಆರೋಪಿಗಳ ವಿರುದ್ದ ಮಾಡಿರುವ ಆರೋಪಗಳ ರೀತ್ಯಾ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉಗಮವಾಗಿರುತ್ತವೆ.

:: **ಅಂಶಗಳು** ::

**ಅಂಶ ಸಂಖ್ಯೆ:1:** ದಿನಾಂಕಃ02-08-2024 ರಂದು ಬೆಳಗಿನ ಜಾವ 2-30 ಗಂಟೆಯ ಸಮಯದಲ್ಲಿ, ವಿಜಯಪುರ ಪೋಲೀಸ್ ಠಾಣಾ ಸರಹದ್ದು, ವಿಜಯಪುರ ಟೌನ್, ಟಿಪ್ಪು ಸುಲ್ತಾನ ನಗರದಲ್ಲಿ 1ನೇ ಆರೋಪಿಯ ಮನೆ ಇದ್ದು, 1ನೇ ಆರೋಪಿಯು ಮನೆಗೆ ತಡವಾಗಿ ಬಂದಿದ್ದಕ್ಕೆ ಚಾಸಾ-1 ರವರು ಪ್ರಶ್ನಿಸಿದಾಗ ಏಕಾ ಏಕಿ ಚಾಸಾ-1 ರವರ ಬಲಗೈ ತಿರುಗಿಸಿ ಕತ್ತು ಹಿಸುಕಿ, ಕೈ-ಕಾಲುಗಳಿಂದ ಒದ್ದು, ಬೆನ್ನಿಗೆ ಮತ್ತು ಎದೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆಂದು. ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.115(2) ಸಹವಾಚಕ ಕಲಂ. 3(5) ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯು ನಿಸ್ಸಂಶಯಾತೀತವಾಗಿ ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ ರುಜುವಾತು ಪಡಿಸುತ್ತಾರೆಯೇ?

**ಅಂಶ ಸಂಖ್ಯೆ:2:** ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ಮತ್ತು 2ನೇ ಆರೋಪಿಗಳು ಸಮಾನ ಉದ್ದೇಶದಿಂದ, ಆ ಪೈಕಿ 1ನೇ ಆರೋಪಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು. ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.352 ಸಹವಾಚಕ ಕಲಂ.3(5)ರ ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯ ಪಕ್ಷದವರು ನಿಸ್ಸಂಶಯಾತೀತವಾಗಿ ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ ರುಜುವಾತು ಪಡಿಸುತ್ತಾರೆಯೇ?

**ಅಂಶ ಸಂಖ್ಯೆ: 3 :** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ಆರೋಪಿತರು ಅಪರಾಧ ಮಾಡುವ

ಸಮಾನ ಉದ್ದೇಶದಿಂದ, ಆ ಪೈಕಿ 1ನೇ ಆರೋಪಿ ಚಾಸಾ-1 ರವರ ಮೇಲೆ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯ ಪಡಿಸಿ, ಈ ವಿಚಾರವನ್ನು ನಿಮ್ಮ ಮನೆಯವರಿಗೆ ತಿಳಿಸಿದರೆ ನಿನ್ನನ್ನು ಸಾಯಿಸಿ ಬಿಡುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತಾರೆಂದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ. 351(2) ಸಹವಾಚಕ ಕಲಂ.3(5)ರ ಅಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯು ನಿಸ್ಸಂಶಯಾತೀತವಾಗಿ ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ ರುಜುವಾತು ಪಡಿಸುತ್ತಾರೆಯೇ?

**ಅಂಶ ಸಂಖ್ಯೆ:4:** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2ನೇ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಪೈಕಿ 1ನೇ ಆರೋಪಿ ಚಾಸಾ-1 ರವರಿಗೆ ಹಲ್ಲೆ ಮಾಡಿದ ವಿಚಾರವನ್ನು ಮನೆಯವರಿಗೆ ತಿಳಿಸಿದರೆ ಸಾಯಿಸಿ ಬಿಡುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತಾರೆಂದು. ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.351(3) ಸಹವಾಚಕ ಕಲಂ.3(5) ರ ಅಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯು ನಿಸ್ಸಂಶಯಾತೀತವಾಗಿ ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ ರುಜುವಾತು ಪಡಿಸುತ್ತಾರೆಯೇ?

**ಅಂಶ ಸಂಖ್ಯೆ:5:** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2ನೇ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಆ ಪೈಕಿ 2ನೇ ಆರೋಪಿ ಚಾಸಾ-1 ರವರ ಫೋನ್ ಗೆ ಕರೆ ಮಾಡಿ ನಾನು 1ನೇ ಆರೋಪಿಯ ಮೊದಲನೆಯ ಹೆಂಡತಿ, ನಮಗೆ ಮದುವೆಯಾಗಿ 5 ತಿಂಗಳ ಮಗು ಇದೆ, ನನ್ನ ಗಂಡನನ್ನು ನೀನು ಬಿಟ್ಟು ಬಿಡು ಎಂದು ಹಾಗೂ 1ನೇ ಆರೋಪಿ ಚಾಸಾ-1 ರವರ ಮೇಲೆ ಹಲ್ಲೆ

ಮಾಡಿ, ಅವಾಚ್ಯ ಶಬ್ದಗಳಿಂದ ಬೈದು ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳ ನೀಡಿರುತ್ತಾರೆಂದು. ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ. 85 ಸಹವಾಚಕ ಕಲಂ.3(5)ರ ಅಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯು ನಿಸ್ಸಂಶಯಾತೀತವಾಗಿ ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ ರುಜುವಾತು ಪಡಿಸುತ್ತಾರೆಯೇ ?

**ಅಂಶ ಸಂಖ್ಯೆ :6:** ಆದೇಶ ಏನು ?

**11.** ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ನ್ಯಾಯಾಲಯವು ಉತ್ತರ ನೀಡಿರುತ್ತದೆ ;

ಅಂಶ ಸಂಖ್ಯೆ :1: ನಕಾರಾತ್ಮಕವಾಗಿ
ಅಂಶ ಸಂಖ್ಯೆ :2: ನಕಾರಾತ್ಮಕವಾಗಿ
ಅಂಶ ಸಂಖ್ಯೆ :3: ನಕಾರಾತ್ಮಕವಾಗಿ
ಅಂಶ ಸಂಖ್ಯೆ :4: ನಕಾರಾತ್ಮಕವಾಗಿ
ಅಂಶ ಸಂಖ್ಯೆ :5: ನಕಾರಾತ್ಮಕವಾಗಿ
ಅಂಶ ಸಂಖ್ಯೆ :6: ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಂದಾಗಿ.

## ಕಾರಣಗಳು

**12. ಅಂಶ ಸಂಖ್ಯೆಃ 1 ರಿಂದ 5:-** ಅಂಶ **1 ರಿಂದ 5** ಇವುಗಳು ಒಂದನ್ನೊಂದು ಅವಲಂಬಿಸಿದ್ದು ಇವುಗಳನ್ನು ಉತ್ತರಿಸುವಾಗ ಒಂದೇ ರೀತಿಯಾದಂತಹ ಚರ್ಚೆ ಹಾಗೂ ವಿಮರ್ಶೆಗಳ ಅವಶ್ಯಕತೆ ಇರುತ್ತದೆ. ಆದ್ದರಿಂದ ಅವುಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ.

**13.** ಈ ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಮಾಡಲಾದ ಅಪಾದನೆಯನ್ನು ರುಜುವಾತುಪಡಿಸುವ ಸಂಪೂರ್ಣ ಹೊಣೆಗಾರಿಕೆಯು ಅಭಿಯೋಜನೆಯವರ ಮೇಲಿದ್ದು ಅದಕ್ಕಾಗಿ ಅಭಿಯೋಜನೆಯವರು ಸಾಕಷ್ಟು ನಂಬಲಾರ್ಹವಾದ ಸಾಕ್ಷ್ಯ ಪುರಾವೆಗಳನ್ನು ಪೂರೈಸುವ ಹೊಣೆಗಾರಿಕೆಯು ಹಾಗೂ ಆರೋಪಿತರ ಮೇಲಿರುವ ಆರೋಪಗಳನ್ನು

ನಿಸ್ಸಂಶಯಾತೀತವಾಗಿ ರುಜುವಾತುಪಡಿಸುವ ಹೊಣೆಗಾರಿಕೆಯು ಅಭಿಯೋಜನೆಯವರ ಮೇಲೆ ಇರುತ್ತದೆ.

**14.** ಈ ಪ್ರಕರಣದಲ್ಲಿ ಅಭಿಯೋಜನೆಯವರು ಹಾಜರು ಪಡಿಸಿರುವ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಪ್ರಾಸಾ-1 ರವರು ಈ ಪ್ರಕರಣದ ಪಿರ್ಯಾಧಿ, ಪ್ರತ್ಯೆಕ್ಷ, ನೊಂದ, ಗಾಯಾಳು ಮತ್ತು ಮಹಜರ್ ಸಾಕ್ಷಿದಾರರಾಗಿದ್ದು, ಪ್ರಾ.ಸಾ-1ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಮುಖ್ಯ ಸಂಗತಿಗಳೆನೆಂದರೆ ಆರೋಪಿತರು ಗೊತ್ತು 1ನೇ ಆರೋಪಿ ನನ್ನ ಗಂಡ, 2ನೇ ಆರೋಪಿ 1ನೇ ಆರೋಪಿಯ ಮೊದಲನೆ ಹೆಂಡತಿ, ನಾನು ದಿ. 05-01-2024 ರಂದು 1ನೇ ಆರೋಪಿಯೊಂದಿಗೆ ವಿವಾಹ ಮಾಡಿಕೊಂಡಿದ್ದೇನೆ, ಮದುವೆಯಾದ ನಂತರ ನಾನು 1ನೇ ಆರೋಪಿತನ ವಿರುದ್ದ ವರದಕ್ಷಿಣೆ ಕಿರುಕುಳ ಮತ್ತು ಮಾನಸಿಕ ಕಿರುಕುಳ ನೀಡಿದ ಬಗ್ಗೆ ಹಾಗೂ 2ನೇ ವಿವಾಹ ಆದ ಬಗ್ಗೆ ಆರೋಪಿತರ ವಿರುದ್ದ ಯಾವುದೇ ದೂರನ್ನು ನೀಡಿರುವುದಿಲ್ಲ, ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ, ಪೋಲಿಸರ ಕೋರಿಕೆ ಮೇರೆಗೆ ಕೆಲ ಖಾಲಿ ಹಾಳೆಗಳಿಗೆ ಸಹಿ ಮಾಡಿರುತ್ತೇನೆ. ದೂರಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ದೂರಿನಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಿಪಿ-1 ರಲ್ಲಿ ಏನು ಬರೆದಿರುತ್ತದೆಂದು ನನಗೆ ಗೊತ್ತಿಲ್ಲ, ನಿಪಿ-2 ಕ್ಕೆ ಎಲ್ಲಿ, ಯಾವಾಗ ಮತ್ತು ಏಕೆ ಸಹಿ ಮಾಡಿರುತ್ತೇನೆಂದು ನನಗೆ ಗೊತ್ತಿಲ್ಲ, ಇನ್ನುಳಿದಂತೆ ಈ ಪ್ರಕರಣದ ಸಂಬಂಧ ಯಾವುದೇ ವಿಷಯ ನನಗೆ ಗೊತ್ತಿಲ್ಲವೆಂದು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಮೇರೆಗೆ ಪಾಟಿ ಸವಾಲು ಮಾಡಿದರೂ ಸಹ, ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೇ ಸಾಕ್ಷ್ಯವನ್ನು ಪ್ರಾಸಾ-1 ರವರಿಂದ ಹೊರತೆಗೆಯುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುತ್ತದೆ. ಆದ್ದರಿಂದ ಪ್ರಾಸಾ-1 ರವರ ಸಾಕ್ಷ್ಯದಲ್ಲಿ ಅಭಿಯೋಜನೆಯು ಆರೋಪಿತರ ವಿರುದ್ಧ ಅಪಾದಿಸಲಾದ ಯಾವುದೇ ಘಟಕಾಂಶಗಳು ಕಂಡು ಬಂದಿರುವುದಿಲ್ಲ.

**15.** ಮುಂದುವರೆದು ಅಭಿಯೋಜನೆಯವರು ಈ ಪ್ರಕರಣದ ಸ್ವತಂತ್ರ ಮತ್ತು ಪ್ರತ್ಯೆಕ್ಷ ಸಾಕ್ಷಿದಾರರಾದ ಚಾಸಾ-2 ಮತ್ತು 3 ರವರನ್ನು ಪ್ರಾಸಾ-2 ಮತ್ತು

3ಎಂದು ಸಾಕ್ಷ್ಯ ವಿಚಾರಣೆಗೊಳಪಡಿಸಿದ್ದು, ಪ್ರಾ.ಸಾ-2 ಮತ್ತು 3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಮುಖ್ಯ ಸಂಗತಿಗಳೆನೆಂದರೆ 1ನೇ ಆರೋಪಿ ನಮ್ಮ ಸ್ನೇಹಿತ, ಈ ಪ್ರಕರಣದ ಬಗ್ಗೆ ನಮಗೆ ಯಾವುದೇ ಮಾಹಿತಿ ಇರುವುದಿಲ್ಲ, ನಾವು ಯಾವುದೇ ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ, ನಾವು ಈ ಪ್ರಕರಣದ ಸಂಬಂದ ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ, ಇನ್ನುಳಿದಂತೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ನಮಗೆ ಗೊತ್ತಿಲ್ಲವೆಂದು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ನ್ಯಾಯಾಲಯದ ಅನುಮತಿ ಮೇರೆಗೆ ಪಾಟಿ ಸವಾಲು ಮಾಡಿದರೂ ಸಹ, ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗುವಂತಹ ಯಾವುದೇ ಸಾಕ್ಷ್ಯವನ್ನು ಪ್ರಾಸಾ-2 ಮತ್ತು ಪ್ರಾಸಾ-3 ರವರಿಂದ ಹೊರತೆಗೆಯುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುತ್ತದೆ. ಆದ್ದರಿಂದ ಪ್ರಾಸಾ-2 ಮತ್ತು 3 ರವರ ಸಾಕ್ಷ್ಯದಲ್ಲಿ ಅಭಿಯೋಜನೆಯು ಆರೋಪಿತರ ವಿರುದ್ಧ ಅಪಾದಿಸಲಾದ ಯಾವುದೇ ಘಟಕಾಂಶಗಳು ಕಂಡು ಬಂದಿರುವುದಿಲ್ಲ.

**16.** ಮುಂದುವರೆದು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ 1 ರಿಂದ ಪ್ರಾಸಾ-3 ರವರು ಸಂಪೂರ್ಣವಾಗಿ ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿದ್ದರೂ ಸಹ ಇತರೆ ಸಾಕ್ಷಿದಾರರಿಂದ ಪ್ರಕರಣವನ್ನು ಸಾಭೀತು ಪಡಿಸಬಹುದೆಂದು ಹೇಳಿ ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡು ಇತರ ಸಾಕ್ಷಿದಾರರಿಗೆ ಸಮನ್ಸ ಹೊರಡಿಸಬೇಕೆಂದು ಕೋರಿಕೆಯನ್ನು ಮಾಡಿರುತ್ತಾರೆ. ಆದರೆ ಈ ಪ್ರಕರಣದಲ್ಲಿ ಪ್ರಾ.ಸಾ 1 ರಿಂದ 3 ರವರು ಪಿರ್ಯಾಧಿ, ಪ್ರತ್ಯಕ್ಷ, ನೊಂದ, ಗಾಯಾಳು, ಸ್ವತಂತ್ರ ಮತ್ತು ಮಹಜರ್ ಸಾಕ್ಷಿದಾರರಾಗಿದ್ದು, ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು, ಅದೇ ರೀತಿ ಪ್ರಕರಣದ ಇನ್ನುಳಿದ ಸಾಕ್ಷಿದಾರರಾದ ಸಾಂಧರ್ಬಿಕ ಮತ್ತು ಪಂಚನಾಮೆ ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷ್ಯ ವಿಚಾರಣೆಗೆ ಒಳಪಡಿಸಿದರು ಸಹ ಪ್ರಾ.ಸಾ-1 ರಿಂದ 3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ 1ನೇ ಆರೋಪಿ ಚಾಸಾ-1 ರವರ ಗಂಡ, 2ನೇ ಆರೋಪಿ 1ನೇ ಆರೋಪಿಯ ಮೊದಲನೇ ಹೆಂಡತಿ, ದಿ. 05-01-2024 ರಂದು 1ನೇ ಆರೋಪಿಯೊಂದಿಗೆ ಚಾಸಾ-1 ರವರು ವಿವಾಹ ಮಾಡಿಕೊಂಡಿದ್ದು, ಮದುವೆಯಾದ ನಂತರ 1ನೇ ಆರೋಪಿತನ ವಿರುದ್ದ ವರದಕ್ಷಿಣೆ ಕಿರುಕುಳ ಮತ್ತು ಮಾನಸಿಕ ಕಿರುಕುಳ ನೀಡಿದ ಬಗ್ಗೆ ಹಾಗೂ 2ನೇ ವಿವಾಹ ಆದ ಬಗ್ಗೆ ಆರೋಪಿತರ ವಿರುದ್ದ ಯಾವುದೇ ದೂರನ್ನು ನೀಡಿರುವುದಿಲ್ಲ, ಈ ಪ್ರಕರಣದ ಬಗ್ಗೆ ನಮಗೆ ಯಾವುದೇ ಮಾಹಿತಿ

ಇರುವುದಿಲ್ಲ, ಪೋಲಿಸರ ಕೋರಿಕೆ ಮೇರೆಗೆ ಕೆಲ ಖಾಲಿ ಹಾಳೆಗಳಿಗೆ ಸಹಿ ಮಾಡಿರುತ್ತೇವೆ. ದೂರಿನ ಬಗ್ಗೆ ನಮಗೆ ಯಾವುದೇ ಮಾಹಿತಿ ಇರುವುದಿಲ್ಲ. ನಿಪಿ-1 ರಲ್ಲಿ ಏನು ಬರೆದಿರುತ್ತದೆಂದು ನಮಗೆ ಗೊತ್ತಿಲ್ಲ, ನಿಪಿ-2 ಕ್ಕೆ ಎಲ್ಲಿ, ಯಾವಾಗ ಮತ್ತು ಏಕೆ ಸಹಿ ಮಾಡಿರುತ್ತೇವೆಂದು ಗೊತ್ತಿಲ್ಲ, ಇನ್ನುಳಿದಂತೆ ಈ ಪ್ರಕರಣದ ಸಂಬಂಧ ಯಾವುದೇ ವಿಷಯ ಗೊತ್ತಿಲ್ಲವೆಂದು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇನ್ನುಳಿದ ಸಾಂಧರ್ಬಿಕ ಮತ್ತು ಪಂಚನಾಮೆ ಸಾಕ್ಷಿದಾರರ ಕೃತ್ಯ ನಡೆದ ಬಗ್ಗೆ ಸಾಕ್ಷ್ಯವನ್ನು ದಾಖಲಿಸಿಕೊಂಡರೂ ಸಹ ಯಾವುದೇ ಪ್ರಯೋಜನೆ ಆಗುವುದಿಲ್ಲ. ಆದ್ದರಿಂದ ಇತರೆ ಸಾಂಧರ್ಬಿಕ ಮತ್ತು ಪಂಚನಾಮೆ ಸಾಕ್ಷಿದಾರರನ್ನು ವಿಚಾರಣೆ ಮಾಡಬೇಕೆನ್ನುವ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಳ್ಳಿ ಹಾಕಲಾಯಿತು.

**17.** ಅದೇ ರೀತಿ ಈ ಪ್ರಕರಣದಲ್ಲಿ ಪ್ರಾ.ಸಾ-1 ರವರು ಹಲ್ಲೆಗೆ ಒಳಗಾದ ಹಾಗೂ ಗಾಯಾಳು ಮತ್ತು ನೊಂದ ಸಾಕ್ಷಿದಾರರಾಗಿದ್ದು, ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು ಹಾಗೂ ತಮಗೆ ಆದ ಗಾಯಗಳ ಬಗ್ಗೆ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ. ಒಂದು ವೇಳೆ ಗಾಯಾಳುಗಳಿಗೆ ಚಿಕಿತ್ಸೆ ನೀಡಿದ ವೈದ್ಯರನ್ನು ನ್ಯಾಯಾಲಯಕ್ಕೆ ಕರೆಸಿ ವಿಚಾರಣೆ ಮಾಡಿದರೂ ಸಹ ಗಾಯದ ಪ್ರಮಾಣ ಪತ್ರದಲ್ಲಿ ಹೇಳಿರುವ ಗಾಯಗಳನ್ನು ಸಾಭೀತುಪಡಿಸಲು ಸಾದ್ಯವಿರುವುದಿಲ್ಲ. ಕಾರಣ ಗಾಯಾಳು ಆಸ್ಪತ್ರೆಗೆ ಹೋಗಿ ತಮಗಾದ ಗಾಯಗಳ ಬಗ್ಗೆ ವೈದ್ಯರಿಗೆ ಮಾಹಿತಿ ನೀಡಿರುತ್ತಾರೇ ಹೊರತು ಯಾವ ಕಾರಣದಿಂದ ಗಾಯವಾಗಿರುತ್ತದೆ ಎಂದು ಯಾವುದೇ ಹೇಳಿಕೆ ನೀಡಿರುವುದಿಲ್ಲ ಹಾಗೂ ವೈದ್ಯರು ನೀಡಿದ ದಾಖಲೆಗಳು ಕೇವಲ ಪರಿಣಿತರು ನೀಡಿದ ದಾಖಲೆಯಾಗಿರುವುದರಿಂದ ಗಾಯಾಳುವಿನ ಹೇಳಿಕೆ ಮತ್ತು ಪರಿಣಿತರ ವರದಿ ಎರಡು ಹೋಲಿಕೆಯಾದಲ್ಲಿ ಮಾತ್ರ ಆರೋಪಿತರ ವಿರುದ್ದ ಹೊರಡಿಸಿರುವ ಆರೋಪಗಳನ್ನು ಸಾಭೀತು ಪಡಿಸಲು ಸಾಧ್ಯವಾಗುವುದರಿಂದ ನ್ಯಾಯಾಲಯವು ವೈದ್ಯರನ್ನು ಕರೆಸಿ ವಿಚಾರಣೆಗೆ ಒಳಪಡಿಸಿದರೂ ಸಹ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ಮನಗಂಡು ಮಾನ್ಯ ಸಹಾಯಕ ಸರ್ಕಾರಿ ಸಹಾಯಕ ಅಭಿಯೋಜಕರ ಉಳಿದ ಸಾಕ್ಷಿದಾರರಿಗೆ ಸಮನ್ಸ್ ಹೋರಡಿಸ ಬೇಕೆನ್ನುವ ಕೋರಿಕೆಯನ್ನು ತಳ್ಳಿ ಹಾಕಿರುತ್ತದೆ.

**18.** ಇನ್ನುಳಿದಂತೆ ಪ್ರಕರಣವನ್ನು ದಾಖಲಿಸಿಕೊಂಡ ಹಾಗೂ ತನಿಖೆಯನ್ನು ಮಾಡಿದ ಇನ್ನೂಳಿದ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿದರೂ ಸಹ ಚಾ.ಸಾ-1

ರವರು ನೀಡಿದ ದೂರನ್ನು ದಾಖಲಿಸಿಕೊಂಡ ಬಗ್ಗೆ ಹಾಗೂ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡ ಬಗ್ಗೆ ಮಾತ್ರ ಸಾಕ್ಷ್ಯ ನುಡಿಯಬಹುದು. ಆದರೆ ಪ್ರಾ.ಸಾ 1 ರಿಂದ 3 ರವರು ನಿ.ಪಿ-1 ರಿಂದ 4 ರಲ್ಲಿ ಹೇಳಿರುವ ಎಲ್ಲ ಅಂಶಗಳನ್ನು ಅಲ್ಲಗಳೆದಿರುವುದರಿಂದ ಪ್ರಥಮ ವರ್ತಮಾನ ವರದಿಗೆ ಯಾವುದೇ ಮಾನ್ಯತೆ ಇರುವುದಿಲ್ಲ. ಇನ್ನುಳಿದಂತೆ ತನಿಖಾಧಿಕಾರಿಗಳು ಸ್ಥಳ ಪಂಚನಾಮೆ ಮಾಡಿದ ಬಗ್ಗೆ ಹಾಗೂ ಸಾಕ್ಷಿದಾರರ ಹೇಳಿಕೆ ಪಡೆದ ಬಗ್ಗೆ ಸಾಕ್ಷ್ಯ ನುಡಿಯಬಹುದು, ಆದರೆ ಪ್ರಾ.ಸಾ 1 ರಿಂದ 3 ರವರು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಹಾಗೂ ತನಿಖಾಧಿಕಾರಿಗಳು ಇನ್ನಿತರೇ ದಾಖಲೆಗಳನ್ನು ನಿಶಾನೆಗೊಳಿಸಿದರೂ ಸಹ ಅಭಿಯೋಜನೆ ಪ್ರಕರಣವನ್ನು ಸಂಪೂರ್ಣವಾಗಿ ಮತ್ತು ನಿಸ್ಸಂಶಯಾತೀತವಾಗಿ ರುಜುವಾತುಪಡಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನ್ಯಾಯಾಲಯವು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಇತರೆ ಸಾಕ್ಷಿದಾರರಿಗೆ ಸಮನ್ಸ ಹೋರಡಿಸಬೇಕೆಂಬ ಕೋರಿಕೆಯನ್ನು ತಳ್ಳಿ ಹಾಕಿರುತ್ತದೆ.

**18.** ಅದೇ ರೀತಿ ಪ್ರಾ.ಸಾ1 ರಿಂದ 3 ರವರ ಸಾಕ್ಷ್ಯದಲ್ಲಿ ಆರೋಪಿತರನ್ನು ಶಿಕ್ಷೆಗೆ ಒಳಪಡಿಸುವ ಮತ್ತು ಆರೋಪಿತರಿಗೆ ವ್ಯತಿರಿಕ್ತವಾಗುವ ಯಾವುದೇ ಸಾಕ್ಷ್ಯ ಇರುವುದಿಲ್ಲ. ಆದ್ದರಿಂದ ನ್ಯಾಯಾಲಯವು ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ, 2023 ರ ಕಲಂ. 351(1)(b)ರ ಅಡಿಯಲ್ಲಿ ಆರೋಪಿತರನ್ನು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳದೆ ಕೈಬಿಟ್ಟಿರುತ್ತದೆ.

**19.** ಪ್ರಾಸಾ-1 ರಿಂದ 3 ರವರು ಈ ಪ್ರಕರಣದ ಪ್ರಮುಖ ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆಯ ಪ್ರಕರಣದ ವಿರುದ್ದವಾಗಿ ಸಾಕ್ಷ್ಯ ನೀಡಿದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಸಹಾಯಕವಾಗುವುದಿಲ್ಲವೆಂದು ಕಂಡುಬಂದ ಕಾರಣ ನ್ಯಾಯಾಲಯವು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಬೇಕೆಂಬ ಮನವಿಯನ್ನು ತಿರಸ್ಕರಿಸಿರುತ್ತದೆ. ಈ ಮೇಲ್ಕಂಡ ಕಾರಣಗಳಿಂದ ಆರೋಪಿಗಳು ಮೇಲ್ಕಂಡ ಆಪಾದನೆಯನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಯಾವುದೇ ಸಂದೇಹಕ್ಕೆ ಅಸ್ಪದವಿಲ್ಲದಂತೆ, ನಂಬಲು ಅರ್ಹವಾದ ಹಾಗೂ ಕಾನೂನು ಬದ್ದವಾದ ಸಾಕ್ಷ್ಯಾಧಾರಗಳಿಂದ ರುಜುವಾತುಪಡಿಸಲಾಗದ ಕಾರಣ ಸಂಶಯದ ಲಾಭವನ್ನು ಆರೋಪಿಗಳಿಗೆ ನೀಡಿ ಅಂಶ ಸಂಖ್ಯೆ 1 ರಿಂದ 5 ಗಳನ್ನು ಈ ನ್ಯಾಯಾಲಯವು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**20. ಅಂಶ ಸಂಖ್ಯೆ :6:** ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡಂತೆ ಆದೇಶವನ್ನು ಈ ನ್ಯಾಯಾಲಯವು ಮಾಡಿರುತ್ತದೆ.

**ಆದೇಶ**

ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ, **2023 ರ** ಕಲಂ.271(1)ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಈ ನ್ಯಾಯಾಲಯವು ಚಲಾಯಿಸಿ 1 ಮತ್ತು 2ನೇ ಆರೋಪಿಗಳ ವಿರುದ್ದ ಭಾರತೀಯ ನ್ಯಾಯ ಸಂಹಿತಾ ಕಲಂ. 85, 115(2), 352, 351(2), 351(3) ಸಹವಾಚಕ ಕಲಂ.3(5) ರ ಅಡಿಯಲ್ಲಿ ಹೊರಿಸಲಾದ ಆರೋಪಗಳಿಂದ 1 ಮತ್ತು 2ನೇ ಆರೋಪಿಗಳನ್ನು ದೋಷಮುಕ್ತಗೊಳಿಸಿ ನಿರ್ದೋಷಿಗಳೆಂದು ನಿರ್ಣಯಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿರುತ್ತದೆ.

1 ಮತ್ತು 2ನೇ ಆರೋಪಿಗಳು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿನ ಬಾಂಡ್ ಮತ್ತು ಮುಚ್ಚಳಿಕೆಯು ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ ಕಲಂ.481(1)ರ ಅಡಿಯಲ್ಲಿ 6 ತಿಂಗಳ ವರೆಗೆ ಜಾರಿಯಲ್ಲಿರುತ್ತವೆ.

(ಶ್ರೀಘ್ರಲಿಪಿಗಾರಳಿಗೆ ಗಣಕೀಕರಣದ ಮೂಲಕ ನೇರವಾಗಿ ಉಕ್ತಲೇಖನ ಕೊಟ್ಟು, ತಿದ್ದುಪಡಿ ಮಾಡಿ, ನಂತರ ತೆರೆದ ನ್ಯಾಯಾಲಯದಲ್ಲಿ 17 ನೇ ಮಾರ್ಚ 2026 ರಂದು ಘೋಷಿಲಾಯಿತು)

**(ಶ್ರೀ.ಕೆಂಚನಗೌಡ ಪಾಟೀಲ)**
2ನೇ ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ

**ಅನುಸೂಚಿ**

**1. ಅಭಿಯೋಜನೆ ಪರ ನುಡಿದಂತಹ ಸಾಕ್ಷಿಗಳ ವಿವರಃ**

ಚಾಸಾ-1/ಪ್ರಾಸಾ-1 : ಶ್ರೀಮತಿ. ಜಮೀಲಾ ಕೋಂ ಅಜೀಜ್ ಮುಬಾರಕ್

ಚಾಸಾ-2/ಪ್ರಾಸಾ-2 : ಶ್ರೀ. ಸೈಯದ್ ಕದೀರ್ ಪಾಷಾ ಬಿನ್ ಸೈಯದ್ ಇಸ್ಮಾಯಿಲ್ ಸಾಬ್

ಚಾಸಾ-3/ಪ್ರಾಸಾ-3 : ಶ್ರೀ. ಖಾಜಾ ಬಿನ್ ಚಾಂದ್ ಪಾಷಾ

**2. ಅಭಿಯೋಜನೆ ಪರ ಗುರುತಿಸಲಾದ ದಾಖಲೆಗಳ ವಿವರಃ**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ) | : | ಪ್ರಾ.ಸಾ 1 ರವರ ಸಹಿ |
| ನಿಪಿ-2 | : | ಸ್ಥಳ ಪಂಚನಾಮೆ |
| ನಿಪಿ-2(ಎ) | : | ಪ್ರಾ.ಸಾ 1 ರವರ ಸಹಿ |
| ನಿಪಿ-3 | : | ಪ್ರಾ.ಸಾ 2 ರವರ ಹೇಳಿಕೆ |
| ನಿಪಿ-4 | : | ಪ್ರಾ.ಸಾ 3 ರವರ ಹೇಳಿಕೆ |

**3. ಅಭಿಯೋಜನೆ ಪರ ಗುರುತಿಸಲಾದ ಮುದ್ದೆಮಾಲುಗಳು ವಿವರ:**

**- ಇಲ್ಲ -**

**4. ಆರೋಪಿತರ ಪರ ವಿಚಾರಣೆಗೊಳಪಡಿಸಿದ ಸಾಕ್ಷಿದಾರರ ವಿವರ:**

**- ಇಲ್ಲ -**

**5. ಆರೋಪಿತರ ಪರ ಗುರುತಿಸಲಾದ ದಾಖಲೆಗಳ ವಿವರಃ**

**- ಇಲ್ಲ -**

**6. ಆರೋಪಿತರ ಪರ ಗುರುತಿಸಲಾದ ಮುದ್ದೆಮಾಲುಗಳು ವಿವರ:**

**- ಇಲ್ಲ -**

**(ಶ್ರೀ.ಕೆಂಚನಗೌಡ ಪಾಟೀಲ)**
2ನೇ ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ.

**ವಿವರವಾದ ಪ್ರತ್ಯೇಕ ತೀರ್ಪುನ್ನು ಪ್ರಕಟ ಮಾಡಿದ್ದು, ಅಂತಿಮ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು**

**ಆದೇಶ**

ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ, 2023ರ ಕಲಂ.271(1)ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಈ ನ್ಯಾಯಾಲಯವು ಚಲಾಯಿಸಿ 1 ಮತ್ತು 2ನೇ ಆರೋಪಿಗಳ ವಿರುದ್ದ ಭಾರತೀಯ ನ್ಯಾಯ ಸಂಹಿತಾ ಕಲಂ. 85, 115(2), 352, 351(2), 351(3) ಸಹವಾಚಕ ಕಲಂ.3(5) ರ ಅಡಿಯಲ್ಲಿ ಹೊರಿಸಲಾದ ಆರೋಪಗಳಿಂದ 1 ಮತ್ತು 2ನೇ ಆರೋಪಿಗಳನ್ನು ದೋಷಮುಕ್ತಗೊಳಿಸಿ ನಿರ್ದೋಷಿಗಳೆಂದು ನಿರ್ಣಯಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿರುತ್ತದೆ.

1 ಮತ್ತು 2ನೇ ಆರೋಪಿಗಳು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿನ ಬಾಂಡ್ ಮತ್ತು ಮುಚ್ಚಳಿಕೆಯು ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ ಕಲಂ.481(1)ರ ಅಡಿಯಲ್ಲಿ 6 ತಿಂಗಳ ವರೆಗೆ ಜಾರಿಯಲ್ಲಿರುತ್ತವೆ.

**(ಶ್ರೀ. ಕೆಂಚನಗೌಡ ಪಾಟೀಲ)**
2ನೇ ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ.